# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್(ಪಿ.ಸಿ.) ಸಂಖ್ಯೆ: 06/2022

ಪಿಡಬ್ಲ್ಯೂ: 02
ಸಿಡಬ್ಲ್ಯೂ: 02

ದಿನಾಂಕ: **21-06-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | : ವಿನಯ್ ಕುಮಾರ್ ಎಂ. |
| ತಂದೆಯ ಹೆಸರು | : ಕೆ. ಮಾರಪ್ಪ |
| ವಯಸ್ಸು | : 29 ವರ್ಷ |
| ಉದ್ಯೋಗ | : ದ್ವಿ.ದ.ಸ. ತೋಟಗಾರಿಕೆ ಇಲಾಖೆ, ಚಿತ್ರದುರ್ಗ |
| ವಾಸ ಸ್ಥಳ | : ಜಗಳೂರು |

ಮುಖ್ಯ ವಿಚಾರಣೆ: ಮಾನ್ಯ **ವಿಶೇಷ** ಸರ್ಕಾರಿ ಅಭಿಯೋಜಕರವರಿಂದ:

ದಿನಾಂಕ **31–07–2021** ರಿಂದ ನಾನು ತೋಟಗಾರಿಕೆ ಇಲಾಖೆ ಚಿತ್ರದುರ್ಗದಲ್ಲಿ ದ್ವಿ.ದ.ಸ ಎಂದು ಸೇವೆ ಸಲ್ಲಿಸುತ್ತಿದ್ದೇನೆ. ದಿನಾಂಕ **14–09–2021** ರಂದು ನಮ್ಮ ಮೇಲಾಧಿಕಾರಿಯ ಆದೇಶದಂತೆ ನಾನು ಮತ್ತು ರಾಕೇಶ್ ಚಿತ್ರದುರ್ಗದ ಎಸಿಬಿ ಕಛೇರಿಗೆ ಹೋಗಿದ್ದೆವು. ಅಲ್ಲಿದ್ದಂತಹ ಡಿವೈಎಸ್ ಪಿ ಯವರು ತಮ್ಮನ್ನು ಹಾಗೂ ಸಿಬ್ಬಂದಿಗಳನ್ನು ನಮಗೆ ಪರಿಚಯಿಕೊಂಡರು. ಅಲ್ಲದೇ ಚಿತ್ರದುರ್ಗದ ನೇತ್ರಾ ಎಂಬುವವರ ಪರಿಚಯವನ್ನು ಕೂಡಾ ನಮಗೆ ಮಾಡಿಸಿದರು ಹಾಗೂ ಅವರು ಕೊಟ್ಟಂತಹ ದೂರಿನ ವಿಷಯವನ್ನು ನಮಗೆ ಹೇಳಿದರು. ಅವರು ತಮಗೆ ಸೇರಿದ ಸರ್ವೆ ನಂ.**372** ಹಾಗೂ **13** ಇವುಗಳಲ್ಲಿ ರಸ್ತೆ ಅಗಲೀಕರಣಕ್ಕಾಗಿ ಅವರ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದು ಆ ವಿಚಾರವಾಗಿ ಅವರಿಗೆ ಪರಿಹಾರ ಬರಬೇಕಾಗಿದ್ದು ಕಾರಣ ರೂ.**6** ಲಕ್ಷ ಹಣವನ್ನು ಲಂಚವಾಗಿ ತಮಗೆ ಕೇಳಲಾಗಿದೆ ಎಂದು ತಿಳಿಸಿದರು. ಆ ಲಂಚವನ್ನು ಮನ್ಸೂರ್ ಮೂಲಕ ಕೇಳಲಾಗಿದೆ ಎಂದು ತಿಳಿಸಿದರು. ತದ ನಂತರ **2** ಸಾವಿರ ಮುಖ ಬೆಲೆಯ **300** ನೋಟುಗಳನ್ನು ನೇತ್ರಾ ಹಾಜರುಪಡಿಸಿದರು. ಆ ನೋಟುಗಳ ಮೇಲಿರುವ ನಂಬರುಗಳನ್ನು ರಾಕೇಶ್ ಹೇಳುತ್ತಾ ಹೋದರು, ಅವುಗಳನ್ನು ಪೇಪರ್ ಮೇಲೆ ನಾನು ಬರೆದುಕೊಳ್ಳುತ್ತಾ ಹೋದೆ. ನಂತರ ಮೂರು ಬೌಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು. ಆ ಪೈಕಿ ಒಂದು ಬಾಟಲ್ ನಲ್ಲಿ ಮಾದರಿ ದ್ರಾವಣವನ್ನು ತೆಗೆದುಕೊಂಡರು. ಸದರಿ ಬಾಟಲಿಯನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **19** ಎಂದು ಗುರುತಿಸಲಾಯಿತು. ರಾಕೇಶ್ ಇವರ ಕೈಯನ್ನು ಒಂದು ಬೌಲಿನಲ್ಲಿ ತೊಳೆಯಲಾಯಿತು ಆದರೆ ಆ ದ್ರಾವಣದ ಬಣ್ಣ ಬದಲಾಗಲಿಲ್ಲ. ಆ ದ್ರಾವಣವನ್ನು ಬಾಟಲಿಯಲ್ಲಿ ಸಂಗ್ರಹಿಸಲಾಗಿದ್ದು ಸದರಿ ಬಾಟಲ್ ನೋಡುತ್ತಿದ್ದು ಅದನ್ನು ಮುದ್ದೆ ಮಾಲು **1** ಎಂದು ಈಗಾಗಲೇ ಗುರುತಿಸಲಾಗಿದೆ.

**2.** ನಂತರ ಆ ನೋಟುಗಳಿಗೆ ಫಿನಾಪ್ತಲೀನ್ ಪೌಡರನ್ನು ಲೇಪಿಸಲಾಯಿತು. ಆ ನಂತರ ದೂರುದಾರಳ ವ್ಯಾನಿಟೀ ಬ್ಯಾಗನ್ನು ಪರಿಶೀಲನೆ ಮಾಡಿ ಆ ಬ್ಯಾಗಿನಲ್ಲಿ ಆ ಹಣವನ್ನು ರಾಕೇಶ್

ಇಟ್ಟರು. ತದ ನಂತರ ಅವರ ಕೈಯನ್ನು ಆ ಬೌಲಿನಲ್ಲಿದ್ದಂತಹ ದ್ರಾವಣದಲ್ಲಿ ಅದ್ದಿದಾಗ ಅದರ ಬಣ್ಣ ಬದಲಾಯಿತು. ಆ ದ್ರಾವಣದ ಮಾದರಿಯ ಬಾಟಲನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **2** ಎಂದು ಈಗಾಗಲೇ ಗುರುತಿಸಲಾಗಿದೆ. ಆ ಬಾಟಲುಗಳ ಮೇಲೆ ನನ್ನ ಸಹಿಗಳುಳ್ಳ ಚೀಟಿಗಳನ್ನು ಅಂಟಿಸಲಾಗಿದೆ.

**3.** ಮನ್ಸೂರ್ ಹಾಗೂ ದೂರುದಾರರ ಮಧ್ಯೆ ಆದಂತಹ ಸಂಭಾಷಣೆಯನ್ನು ನಮಗೆ ಕೇಳಿಸಲಾಯಿತು. ಅದನ್ನು ಮೆಮೋರಿ ಕಾರ್ಡಿನಲ್ಲಿ ದಾಖಲಿಸಿಕೊಳ್ಳಲಾಗಿತ್ತು. ಅದನ್ನು ನೋಡುತ್ತಿದ್ದು ಮೆಮೋರಿ ಕಾರ್ಡನ್ನು ಈಗಾಗಲೇ ಮುದ್ದೆ ಮಾಲು **12** ಎಂದು ಗುರುತಿಸಲಾಗಿದೆ. ಈಗ ನನಗೆ ತೋರಿಸಲಾದ ನನ್ನ ಹಸ್ತಾಕ್ಷರವುಳ್ಳ ಬಿಳಿ ಹಾಳೆಗಳನ್ನು ನೋಡುತ್ತಿದ್ದು ಅವುಗಳಲ್ಲಿ ಪ್ರತೀ ಪುಟದಲ್ಲೂ ನಾನು ಮತ್ತು ರಾಕೇಶ್ ಸಹಿಗಳನ್ನು ಮಾಡಿದ್ದು ಆ ಬಿಳಿ ಹಾಳೆಗಳಲ್ಲಿ ನಾನು ನೋಟುಗಳ ನಂಬರಗಳನ್ನು ಬರೆದುಕೊಂಡಿದ್ದೇನೆ. ಅವುಗಳು ಒಟ್ಟು **12** ಹಾಳೆಗಳಿದ್ದು ಅವುಗಳನ್ನು ಒಟ್ಟಾಗಿ ನಿಪಿ–**38** ಎಂದು ಅವುಗಳಲ್ಲಿರುವ ನನ್ನ ಸಹಿಗಳ ಪೈಕಿ ಮೊದಲನೇ ಪುಟದ ಮೇಲಿರುವ ಸಹಿಯನ್ನು ನಿಪಿ–**38**(ಎ) ಎಂದು ಗುರುತಿಸಲಾಯಿತು. ಡಿವೈಎಸ್ ಪಿ ಯವರು ದೂರುದಾರರಿಗೆ ಆ ಹಣವನ್ನು ನೀವು ಬಳಸಿಕೊಳ್ಳುವಾಗಿಲ್ಲ ಎಂದು ಮತ್ತು ಅದನ್ನು ಯಾವ ರೀತಿ ಬಳಸಬೇಕೆಂಬುದನ್ನು ಅವರಿಗೆ ತಿಳಿಸಿದರು. ಅಲ್ಲದೇ ಟ್ರಾಪ್ ಸಮಯದಲ್ಲಿ ಅವರಿಗೆ ಸೂಚನೆ ನೀಡಬೇಕೆಂಬ ವಿಷಯವನ್ನು ಕೂಡಾ ತಿಳಿಸಿದರು. ಸಂಜೆ **5.00** ಗಂಟೆಯವರೆಗೆ ಮಹಜರನ್ನು ಮಾಡಿದರು. ಸದರಿ ಮಹಜರನ್ನು ನೋಡುತ್ತಿದ್ದು ಅದನ್ನು ನಿಪಿ–**21** ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**21**(ಬಿ. ಎಂದು ಗುರುತಿಸಲಾಯಿತು. ರಾಕೇಶ್ ಕೂಡಾ ಅದಕ್ಕೆ ಸಹಿ ಮಾಡಿದ್ದು ಆತನ ಸಹಿಯನ್ನು ನಿಪಿ–**21**(ಸಿ) ಎಂದು ಗುರುತಿಸಲಾಯಿತು. ಆಗ ತೆಗೆಯಲಾದ ಪೊಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**2** ರಿಂದ **20** ಎಂದು ಈಗಾಗಲೇ ಗುರುತಿಸಲಾಗಿದೆ. ನನಗೆ ನೆರಳು ಸಾಕ್ಷಿದಾರನಾಗಿ ದೂರುದಾರರ ಜೊತೆಗಿರಬೇಕೆಂದು ತಿಳಿಸಲಾಯಿತು.

**4.** ಮುಂದೆ ಸಂಜೆ ಸುಮಾರು **5.15** ಗಂಟೆಗೆ ಚಿತ್ರದುರ್ಗದ ಎಸಿಬಿ ಕಛೇರಿಯಿಂದ ನಾವು ಹೊರಟೆವು. ಮಾರ್ಗ ಮಧ್ಯದಲ್ಲಿ ದೂರುದಾರರ ಮಗನಿಂದ ಅವರಿಗೆ ಫೋನ್ ಬಂತು. ಅಲ್ಲದೇ ಆ ಫೋನಿನಲ್ಲಿ ಮನ್ಸೂರ್ ಕಾಯುತ್ತಿದ್ದಾರೆ ಎಂದು ತಿಳಿಸಲಾಯಿತು. ಆಗ ದೂರುದಾರರು ತಾನು ಬರುತ್ತಿರುವುದಾಗಿ ಹಾಗೂ ಮನ್ಸೂರ್ ಗೆ ಕಾಯುವಂತೆ ತಿಳಿಸಿದರು. ನಂತರ ದೂರುದಾರರು ಮನೆ ಹತ್ತಿರ ಕರೆದುಕೊಂಡು ಹೋದರು. ನಾನು ನೆರಳು ಸಾಕ್ಷಿದಾರನಾಗಿ ಅವರ ಜೊತೆಗೆ ಹೋದೆ. ಉಳಿದ ಅಧಿಕಾರಿಗಳು ದೂರದಲ್ಲಿ ನಿಂತುಕೊಂಡರು. ದೂರುದಾರಳು ತಮ್ಮ ಮನೆಯ ಒಳಗೆ ಹೋದರು. ನಾನು ಅವರ ಮನೆಯ ಬಾಗಿಲ ಬಳಿ ನಿಂತುಕೊಂಡೆ. ದೂರುದಾರಳು ಹಣವನ್ನು ಮನ್ಸೂರ್

ಕೈಯಲ್ಲಿ ಕೊಟ್ಟರು. ಆ ಹಣವನ್ನು ಪಡೆದ ಆತ ಮನೆಯಿಂದ ಹೊರಗೆ ಬಂದು ತನ್ನ ಬೈಕ್ ಮೇಲೆ ಕುಳಿತುಕೊಂಡ. ಆಗ ದೂರುದಾರಳು ಕೂಡಾ ಮನೆಯಿಂದ ಹೊರಗೆ ಬಂದು ಮನ್ಸೂರನನ್ನು ತೋರಿಸಿ ಅವರಿಗೆ ರೂ.**5,30,000/–** ನೀಡಿದ ಬಗ್ಗೆ ಡಿವೈಎಸ್ ಪಿ ಯವರಿಗೆ ತಿಳಿಸಿದರು. ಮನ್ಸೂರ್ ಇವರ ಬೈಕನ್ನು ನಾವುಗಳು ಹಿಂಬಾಲಿಸಿಕೊಂಡು ಹೊರಟೆವು. ಆತ ಚಳ್ಳಕೆರೆ ರಸ್ತೆಯಲ್ಲಿರುವ ಒಂದು ಬಡಾವಣೆಯ ಮನೆಯ ಒಳಗೆ ಹೋದರು. ನಾವು ಆ ಮನೆಯ ಹೊರಗೆ ಕಾಯುತ್ತಿದ್ದೆವು. ಆ ಮನೆಯ ಒಳಗೆ ಹೋದ ಮನ್ಸೂರ್ ಆ ಮನೆಯಿಂದ ಹೊರಗೆ ಬಂದರು. ಆಗ ದೂರುದಾರಳು ಆತನನ್ನು ತೋರಿಸಿ ಆತನೇ ತನ್ನಿಂದ ದುಡ್ಡನ್ನು ಪಡೆದಿದ್ದು ಎಂದು ತಿಳಿಸಿದರು. ಮನ್ಸೂರ್ ತನ್ನ ತಪ್ಪನ್ನು ಒಪ್ಪಿಕೊಂಡು ಅ ಮನೆಯ ಒಳಗೆ ಕರೆದುಕೊಂಡು ಹೋದ ಮತ್ತು ಮ್ಯಾನೇಜರ್ ಮೋಹನ್ ಇವರಿಗೆ ಹಣವನ್ನು ಕೊಟ್ಟಿದ್ದಾಗಿ ಅವರನ್ನು ತೋರಿಸಿದ. ಆ ಹಣವನ್ನು ಮೋಹನ್ ಎಣಿಸುತ್ತಿದ್ದ. ಮೋಹನ್ ಬಳಿ ಇದ್ದ ಹಣವನ್ನು ಪಡೆದು ನಾವು ಅದನ್ನು ಎಣಿಸಿದೆವು. ನಾವು ನಿಪಿ–**38** ರಲ್ಲಿ ಬರೆದುಕೊಂಡಂತಹ ಕ್ರಮ.ಸಂ.**51** ರಿಂದ **300** ರವರೆಗಿನ ನೋಟುಗಳು ಅಲ್ಲಿ ಇದ್ದವು. ಸದರಿ ನೋಟುಗಳನ್ನು ಜಪ್ತಿ ಮಾಡಿಕೊಳ್ಳಲಾಯಿತು. ಆ ನೋಟುಗಳನ್ನು ನೋಡಿದರೆ ನಾನು ಗುರುತಿಸಬಲ್ಲೆ. ಅವುಗಳನ್ನು ಈಗಾಗಲೇ ಮುದ್ದೆ ಮಾಲು **9** ಎಂದು ಗುರುತಿಸಲಾಗಿದೆ. ಉಳಿದಂತಹ ರೂ.**30000/–** ಗಳನ್ನು ಮನ್ಸೂರ್ ಈತನಿಂದ ವಶಪಡಿಸಿಕೊಳ್ಳಲಾಯಿತು. ಆ ನೋಟುಗಳು ನಿಪಿ–**38** ರ ಕ್ರಮ ಸಂ.**36** ರಿಂದ **50** ರವರೆಗೆ ಇದ್ದವು. ಸದರಿ ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಮುದ್ದೆ ಮಾಲು **10** ಎಂದು ಗುರುತಿಸಲಾಗಿದೆ. ಬಾಕಿ ರೂ.**70,000/–** ದೂರುದಾರಳಾದ ನೇತ್ರಾ ಇವರ ಬಳಿಯೇ ಇತ್ತು. ಆ ನೋಟುಗಳ ನಿಪಿ–**38** ರ ಕ್ರಮ ಸಂಖ್ಯೆ **1** ರಿಂದ **35** ರವರೆಗೆ ಇದ್ದವು. ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಅವುಗಳನ್ನು ಈಗಾಗಲೇ ಮುದ್ದೆ ಮಾಲು **11** ಎಂದು ಗುರುತಿಸಲಾಗಿದೆ.

**5.** ತದ ನಂತರ ಮನ್ಸೂರ್ ತೊಟ್ಟಂತಹ ಪ್ಯಾಂಟನ್ನು ತೆಗೆದು ಆತನಿಗೆ ಲುಂಗಿಯನ್ನು ನೀಡಿ ಪ್ಯಾಂಟಿನ ಬಲ ಕಿಸೆಯನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಅದಕ್ಕೆ ಸಂಬಂಧಿಸಿದ ದ್ರಾವಣದ ಬಾಟಲಿಯನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **7** ಎಂದು ಈಗಾಗಲೇ ಗುರುತಿಸಲಾಗಿದ್ದು ಅದರ ಮೇಲೆ ನನ್ನ ಸಹಿ ಇದೆ. ಅಲ್ಲದೇ ಆತನ ಪ್ಯಾಂಟನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಅದನ್ನು ನೋಡುತ್ತಿದ್ದು ಪ್ಯಾಂಟನ್ನು ಮುದ್ದೆ ಮಾಲು **8** ಎಂದು ಈಗಾಗಲೇ ಗುರುತಿಸಲಾಗಿದೆ. ಆ ಮನೆಯಲ್ಲಿಯೇ **4** ಬೌಲುಗಳಲ್ಲಿ ಸೋಡಿಯ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ ಮೋಹನ್ ಹಾಗೂ ಮನ್ಸೂರ್ ಇವರ ಕೈಗಳನ್ನು ತೊಳೆಸಲಾಯಿತು. ಸದರಿ ದ್ರಾವಣಗಳು ಗುಲಾಬಿ ಬಣ್ಣಕ್ಕೆ ತಿರುಗಿದವು. ಆ ದ್ರಾವಣಗಳ ಬಾಟಲಿಗಳನ್ನು ನೋಡುತ್ತಿದ್ದು **1** ನೇ ಆರೋಪಿತನಿಗೆ ಸಂಬಂಧಿಸಿದ ದ್ರಾವಣದ ಬಾಟಲಿಯನ್ನು ಮುದ್ದೆ ಮಾಲು **5** ಹಾಗೂ **6** ಎಂದು ಈಗಾಗಲೇ

ಗುರುತಿಸಲಾಗಿದ್ದು, ಮನ್ಸೂರ್ ಈತನಿಗೆ ಸಂಬಂಧಿಸಿದ ದ್ರಾವಣಗಳ ಬಾಗಲಿಗಳನ್ನು ನೋಡುತ್ತಿದ್ದು ಮುದ್ದೆ ಮಾಲು **3** ಹಾಗೂ **4** ಎಂದು ಈಗಾಗಲೇ ಗುರುತಿಸಲಾಗಿದೆ.

**6.** ಅಲ್ಲಿಂದ ನಾವು ವಿಶೇಷ ಭಸ್ವಾಧೀನಾಧಿಕಾರಿಗಳ ಕಛೇರಿಗೆ ಹೋದೆವು. ಅಲ್ಲಿಗೆ ಹೋದ ನಂತರ ಮನ್ಸೂರ್ ಮೊದಲನೇ ಮಹಡಿಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಇದ್ದಾರೆಂದು ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದ. ಅಲ್ಲಿ ಮನ್ಸೂರ್ ಸದರಿ ಅಧಿಕಾರಿ ಹೇಳಿದ್ದರಿಂದಲೇ ದೂರುದಾರರಿಂದ ಹಣವನ್ನು ಪಡೆದು ಮೋಹನನಿಗೆ ನೀಡಿದ್ದಾಗಿ ತಿಳಿಸಿದ. ಮೋಹನ್ ತನಗೆ ಅಧಿಕಾರಿ ಹೇಳಿದ್ದರ ಮೇರೆಗೆ ಆ ಹಣವನ್ನು ಮನ್ಸೂರನಿಂದ ಪಡೆದುಕೊಂಡಿದ್ದಾಗಿ ತಿಳಿಸಿದ. ಆ ಹಣವನ್ನು ಪಡೆದ ಬಗ್ಗೆ ಅಧಿಕಾರಿ ತಪ್ಪು ಒಪ್ಪಿಕೊಂಡ. ಅಲ್ಲದೇ ಸದರಿ ಎಸ್.ಎಲ್.ಎ.ಓ ರವರು ತಾನು ಹಣ ಪಡೆಯುವ ಕಾಲಕ್ಕೆ ತನಗೆ ವ್ಯಾಟ್ಸ್ಆ್ಯಪ್ ಮೂಲಕ ಕರೆ ಮಾಡಿದ್ದರು ಎಂದು ಮೋಹನ್ ತಿಳಿಸಿದ. ಆ ಕುರಿತು ಸಮಜಾಯಿಷಿ ಕೊಡುವಂತೆ ನೋಟೀಸುಗಳನ್ನು ಎಸಿಬಿಯವರು ಎಸ್.ಎಲ್.ಎ.ಓ. ಮೋಹನ್ ಹಾಗೂ ಮನ್ಸೂರ್ ಇವರಿಗೆ ನೀಡಿದರು. ಅವರುಗಳು ತಮ್ಮ ಸಮಜಾಯಿಷಿಗಳನ್ನು ನೀಡಿದರು. ಎಸ್.ಎಲ್.ಎ.ಓ. ನೀಡಿದಂತಹ ಸಮಜಾಯಿಷಿ ನೋಡುತ್ತಿದ್ದು ಅದರಲ್ಲಿ ನನ್ನ ಹಾಗೂ ರಾಕೇಶನ ಸಹಿಗಳಿದ್ದು ಸದರಿ ಸಮಜಾಯಿಷಿಯನ್ನು ನಿಪಿ**–39** ಎಂದು**,** ನನ್ನ ಸಹಿಯನ್ನು ನಿಪಿ**–39(**ಎ**)** ಎಂದು ಗುರುತಿಸಲಾಯಿತು. ಮೋಹನ್ ನೀಡಿದಂತಹ ಸಮಜಾಯಿಷಿ ನೋಡುತ್ತಿದ್ದು ಅದರಲ್ಲಿ ನನ್ನ ಹಾಗೂ ರಾಕೇಶನ ಸಹಿಗಳಿದ್ದು ಸದರಿ ಸಮಜಾಯಿಷಿಯನ್ನು ನಿಪಿ**–40** ಎಂದು**,** ನನ್ನ ಸಹಿಯನ್ನು ನಿಪಿ**–40(**ಎ**)** ಎಂದು ಹಾಗೂ ರಾಕೇಶನ ಸಹಿಯನ್ನು ನಿಪಿ**–40(**ಬಿ**)** ಎಂದು ಗುರುತಿಸಲಾಯಿತು. ಮನ್ಸೂರ್ ನೀಡಿದಂತಹ ಸಮಜಾಯಿಷಿ ನೋಡುತ್ತಿದ್ದು ಅದರಲ್ಲಿ ನನ್ನ ಹಾಗೂ ರಾಕೇಶನ ಸಹಿಗಳಿದ್ದು ಸದರಿ ಸಮಜಾಯಿಷಿಯನ್ನು ನಿಪಿ**–41** ಎಂದು**,** ನನ್ನ ಸಹಿಯನ್ನು ನಿಪಿ**–41(**ಎ**)** ಎಂದು ಹಾಗೂ ರಾಕೇಶನ ಸಹಿಯನ್ನು ನಿಪಿ**–41(**ಬಿ**)** ಎಂದು ಗುರುತಿಸಲಾಯಿತು.

**7.** ಮೋಹನ್ ಹಾಗೂ ಎಸ್.ಎಲ್.ಎ.ಓ. ವ್ಯಾಟ್ಸ್ಆ್ಯಪ್ ನಲ್ಲಿ ಮಾತನಾಡಿದ ಬಗ್ಗೆ ಅದನ್ನು ಪ್ಲೇ ಮಾಡಿ ಡಿವಿಡಿಗೆ ವರ್ಗಾಯಿಸಿದರು. ಸದರಿ ಡಿವಿಡಿಯನ್ನು ನೋಡುತ್ತಿದ್ದು ಅದನ್ನು ಮುದ್ದೆ ಮಾಲು **18** ಎಂದು ಈಗಾಗಲೇ ಗುರುತಿಸಲಾಗಿದೆ. ಈಗ ನನಗೆ ತೋರಿಸಲಾದ ವ್ಯಾಟ್ಸ್ಆ್ಯಪ್ ಕಾಲ್ ನ ಚಾಟ್ ಶೀಟ್ ನಲ್ಲಿ ನನ್ನ ಹಾಗೂ ರಾಕೇಶನ ಸಹಿಗಳಿದ್ದು ಸದರಿ ಚಾಟ್ ಶೀಟನ್ನು ನಿಪಿ**–42** ಎಂದು ನನ್ನ ಸಹಿಯನ್ನು ನಿಪಿ**–42(**ಎ**)** ಎಂದು ಗುರುತಿಸಲಾಯಿತು. ಅಲ್ಲದೇ ಮನ್ಸೂರ್**,** ಮೋಹನ್ ಮತ್ತು ಎಸ್.ಎಲ್.ಎ.ಓ. ಇವರ ಮಾದರಿ ಧ್ವನಿಗಳನ್ನು ಸಂಗ್ರಹಿಸಿದರು. ಅವರ ಆ ಮೊದಲಿನ ಸಂಭಾಷಣೆಯ ಭಾಗಗಳನ್ನು ಅವರಿಗೆ ಓದಲು ಕೊಡಲಾಯಿತು. ಆ ಪೈಕಿ ಎಸ್.ಎಲ್.ಎ.ಓ ಇವರ ಸಂಭಾಷಣೆಯ ಲೇಖಿ ಪ್ರತಿಯನ್ನು ನೋಡುತ್ತಿದ್ದು ನಿಪಿ**–43** ಎಂದು

ಗುರುತಿಸಲಾಯಿತು. ಅದರಲ್ಲಿ ನನ್ನ ಹಾಗೂ ರಾಕೇಶನ ಸಹಿಗಳು ಇವೆ. ಆ ಪೈಕಿ ನನ್ನ ಸಹಿಯನ್ನು ನಿಪಿ–**43**(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಮೋಹನ್ ಈತನ ಸಂಭಾಷಣೆಯ ಭಾಗದ ಲೇಖಿ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ–**44** ಎಂದು**,** ನನ್ನ ಸಹಿಯನ್ನು ನಿಪಿ–**44**(ಎ) ಎಂದು ಗುರುತಿಸಲಾಯಿತು. ಅದೇ ರೀತಿ ಮನ್ಸೂರ್ ಈತನ ಸಂಭಾಷಣೆಯ ಭಾಗದ ಲೇಖಿ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ–**45** ಎಂದು**,** ನನ್ನ ಸಹಿಯನ್ನು ನಿಪಿ–**45**(ಎ) ಎಂದು ಗುರುತಿಸಲಾಯಿತು. ದೂರುದಾರಳ ಸಂಭಾಷಣೆಯ ಭಾಗದ ಲೇಖೀ ಪ್ರತಿಯನ್ನು ನೋಡುತ್ತಿದ್ದು ಅದರಲ್ಲಿ ಕೂಡಾ ನನ್ನ ಸಹಿ ಇದ್ದು ಅದನ್ನು ನಿಪಿ–**46** ಎಂದು**,** ನನ್ನ ಸಹಿಯನ್ನು ನಿಪಿ–**46**(ಎ) ಎಂದು ಗುರುತಿಸಲಾಯಿತು. ಆ ನಾಲ್ಕೂ ಜನರ ಸಂಭಾಷಣೆಗಳ ಭಾಗವನ್ನು ಡಿವಿಡಿಗಳಲ್ಲಿ ವರ್ಗಾಯಿಸಲಾಯಿತು. ಆ ಡಿವಿಡಿಗಳನ್ನು ನೋಡುತ್ತಿದ್ದು ಅವುಗಳನ್ನು ಅನುಕ್ರಮವಾಗಿ ಮುದ್ದೆ ಮಾಲು **13** ರಿಂದ **16** ಎಂದು ಈಗಾಗಲೇ ಗುರುತಿಸಲಾಗಿದೆ. ಎಸ್.ಎಲ್.ಎ.ಓ ಇವರಿಂದ ನೇತ್ರಾ ಇವರ ಕಡತಗಳ ಪ್ರತಿಗಳನ್ನು ಪಡೆದುಕೊಳ್ಳಲಾಯಿತು. ಆ ಕಡತಗಳನ್ನು ನೋಡುತ್ತಿದ್ದು ಅವುಗಳಲ್ಲಿ ನಮ್ಮ ಸಹಿಗಳಿದ್ದು ಸದರಿ ಕಡತಗಳನ್ನು ನಿಪಿ–**22** ಹಾಗೂ **23** ಎಂದು ಈಗಾಗಲೇ ಗುರುತಿಸಲಾಗಿದೆ.

**8.** ದಿನಾಂಕ **13–09–2021, 14–09–2021** ರಂದು ನೇತ್ರಾ ಮತ್ತು ಮನ್ಸೂರ್ ಇವರುಗಳು ಫೋನಿನಲ್ಲಿ ಮಾತನಾಡಿದ ಬಗ್ಗೆ ಅದನ್ನು ಡಿವಿಡಿಯಲ್ಲಿ ಪ್ಲೇ ಮಾಡಿಸಿ ಅಲ್ಲಿದ್ದಂತಹ ಡಿ ದರ್ಜೆ ನೌಕರನಿಗೆ ಕೇಳಿಸಲಾಯಿತು. ಆತ ಆ ಧ್ವನಿಗಳನ್ನು ಗುರುತಿಸಿದ. ಅದಕ್ಕೆ ಸಂಬಂಧಿಸಿದ ಡಿವಿಡಿಯನ್ನು ನೋಡುತ್ತಿದ್ದು ಅದರಲ್ಲಿ ಕೂಡಾ ನನ್ನ ಹಾಗೂ ರಾಕೇಶನ ಸಹಿಗಳಿದ್ದು ಸದರಿ ಡಿವಿಡಿಯನ್ನು ಮುದ್ದೆ ಮಾಲು **17** ಎಂದು ಈಗಾಗಲೇ ಗುರುತಿಸಲಾಗಿದೆ. ಅದರಲ್ಲಿಯ ಧ್ವನಿ ಮನ್ಸೂರನದ್ದೆಂದು ಸದರಿ ಡಿ ದರ್ಜೆ ನೌಕರ ಹೇಳಿದ. ಆ ಕುರಿತು ಮಾಡಲಾದ ಲೇಖಿ ಪ್ರತಿಯನ್ನು ನೋಡುತ್ತಿದ್ದು ಅದನ್ನು ನಿಪಿ–**47** ಎಂದು**,** ನನ್ನ ಸಹಿಯನ್ನು ನಿಪಿ–**47**(ಎ) ಎಂದು ಗುರುತಿಸಲಾಯಿತು. ನಿಪಿ–**47** ಕ್ಕೆ ರಾಕೇಶ್ ಕೂಡಾ ಸಹಿ ಮಾಡಿದ್ದು ಅದನ್ನು ನಿಪಿ–**47**(ಬಿ) ಎಂದು ಗುರುತಿಸಲಾಯಿತು. ಮೋಹನ್ ಹಾಗೂ ಎಸ್.ಎಲ್.ಎಓ ಮಧ್ಯೆ ಆದಂತಹ ಸಂಭಾಷಣೆಯ ಲೇಖಿ ಪ್ರತಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಹಾಗೂ ರಾಕೇಶನ ಸಹಿಗಳಿದ್ದು ಸದರಿ ಲೇಖಿ ಪ್ರತಿಯನ್ನು ನಿಪಿ–**48** ಎಂದು**,** ನನ್ನ ಸಹಿಯನ್ನು ನಿಪಿ–**48**(ಎ) ಎಂದು ಗುರುತಿಸಲಾಯಿತು. ಈ ಎಲ್ಲಾ ಪ್ರಕ್ರಿಯೆಗಳ ಕುರಿತು ಮಹಜರ್ ಮಾಡಲಾಯಿತು ಮತ್ತು ಫೋಟೋಗಳನ್ನು ತೆಗೆಯಲಾಯಿತು. ಸದರಿ ಮಹಜರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಹಾಗೂ ರಾಕೇಶನ ಸಹಿಗಳಿದ್ದು ಅದನ್ನು ನಿಪಿ–**24** ಎಂದು ಈಗಾಗಲೇ ಗುರುತಿಸಲಾಗಿದ್ದು ನನ್ನ ಸಹಿಯನ್ನು ನಿಪಿ–**24**(ಬಿ) ಎಂದು ಹಾಗೂ ರಾಕೇಶನ ಸಹಿಯನ್ನು ನಿಪಿ–**24**(ಸಿ) ಎಂದು ಗುರುತಿಸಲಾಯಿತು. ಆಗ ತೆಗೆಯಲಾದ ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ನಿಪಿ–**25** ರಿಂದ **37** ಎಂದು

ಈಗಾಗಲೇ ಗುರುತಿಸಲಾಗಿದೆ. ಈ ವಿಚಾರವಾಗಿ ತನಿಖಾಧಿಕಾರಿ ನನ್ನ ಹೇಳಿಕೆಯನ್ನು ಮಾಡಿಕೊಂಡಿದ್ದಾರೆ.

**9.** ಮುಂದೆ ಮತ್ತೆ ದಿನಾಂಕ **16-09-2021** ರಂದು ಎಸಿಬಿ ಪೊಲೀಸರು ಕಛೇರಿಗೆ ಕರೆಸಿದ್ದರು. ಆ ದಿನದಂದು ನನ್ನ ಹೇಳಿಕೆಯನ್ನು ಮಾಡಿಕೊಂಡರು. ಮತ್ತೆ ದಿನಾಂಕ **20-09-2021** ರಂದು ಕರೆಸಿದ್ದರು. ಆ ದಿನ ನಾನು ಪಿಡಬ್ಲ್ಯೂಡಿ ಇಂಜಿನಿಯರ್ ರವರಿಗೆ ಟ್ರಾಪ್ ಮಾಡಲಾದ ಸ್ಥಳವನ್ನು ತೋರಿಸಿದೆ. ಅವರು ಆ ಸ್ಥಳದ ಸ್ಕೆಚ್ ನ್ನು ತಯಾರಿಸಿದರು. ಆ ಬಗ್ಗೆ ಕೂಡಾ ನಾನು ಹೇಳಿಕೆ ನೀಡಿದ್ದೇನೆ. ಆ ವಸ್ತುಗಳ ಮೇಲೆ **AI** ಎಂದು ಸೀಲ್ ಹಾಕಲಾಗಿದ್ದು ಆ ಸೀಲು ನನ್ನ ಬಳಿ ಇದ್ದು ಅದನ್ನು ಈ ದಿನ ನ್ಯಾಯಾಲಯಕ್ಕೆ ತೆಗೆದುಕೊಂಡು ಬಂದಿದ್ದು ಸದರಿ ಸೀಲನ್ನು ಮುದ್ದೆ ಮಾಲು **20** ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಶ್ರೀ ಎನ್.ಜಿ.ಕೆ. ಹಾಗೂ ಶ್ರೀ ಜಿ.ಎನ್. ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ**

ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.